RISE IN PRICE OF YARN AND RAW MATERIALS

397 SRI P.M. BANGI (Jamkhandi).—Will the Minister for Industries be pleased to state : —

(*a*) whether the Government it aware that thousands of handlooms are lying idle and working weavers are rendered unemployed in Bijapur district owing to the steep rise in prices of yarn and other raw materials and for want of customers for finished goods like sarees ;

(*b*) if so, the reasons for not making arrangements for the supply of yarn of 40,60 and 80 counts at cheap rates to handloom weavers of Rabakavi, Banahatti. Guledgud, Ilkal and other Weavers' centres in Bijapur district ;

(*c*) whether there is any proposal before the Government to open godowns for storing raw materials like yarn, art silk etc at Weaveres' Centres like Banahatti, Rabakavi, Guledgud etc in Bijapur district and distribute the yarn on rat on cards through fair price shops ;

(*d*) whether there is any proposal before the Government to advance loans to poor weavers for the purchase of yarn etc., on pledging their finished articles like sarees ?

SRI S.M. KRISHNA.—(Minister for Industries)

(*a*) Yes.

(*b*) and (*c*) Government have issued orders to open Yarn Depots at Banahatti and Ilkal in Bijapur district.

(*d*) Government have sanctioned a loan of Rs. 0.00 lakhs to the Mysore State Industrial Co-operative Bank for granting Pledge, loans to the weavers through the District Industrial Co-operative Bank Bagalkot.

ಶ್ರೀ ಪಿ. ಎಂ. ಬಂಗಿ:—ಯಾವತ್ತೂ ಕಚ್ಚಾಮಾಲು, ರೇಷ್ಮೆ, ಆರ್ಟ್‌ಸಿಲ್ಕ್ ಮತ್ತು ನೂಲು ಇವುಗಳ ಬಗ್ಗೆ ಪ್ರಶ್ನೆ ಕೇಳಿದ್ದರೆ ಯಾರ್ನ್ ಡಿಪೋ ತೆರೆದಿರುವುದಾಗಿ ಹೇಳಿದ್ದಾರೆ. ಅದರಲ್ಲಿ ಕೂಡ ಫೈನ ಯಾರ್ನ ಸಿಕ್ಕುತ್ತಿಲ್ಲ. ನೇಕಾರರಿಗೆ ಅನುಕೂಲವಾಗುವಂತೆ ಯಾವತ್ತೂ ಕಚ್ಚಾಮಾಲು ದೊರೆಯುವಂಥ ಡಿಪೋ ಓಪನ್ ಮಾಡಿದರೆ ಮತ್ತು ಅದರಲ್ಲಿ ಟ್ರಾನ್ಸ್‌ಪೋರ್ಟ ಚಾರ್ಜ ವಜಾ ತೆಗೆದು ನೇಕಾರರಿಗೆ ಕೊಟ್ಟರೆ ಅನುಕೂಲವಾಗುತ್ತದೆ. ನೇಕಾರರ ಸಮಸ್ಯೆ ಬಹಳ ಕಠಿಣವಾಗಿ ಸಾವಿರಾರು ಮಂದಿ ಅನ್ನ ಸತ್ಯಾಗ್ರಹ ಹೂಡಿದ್ದಾರೆ. ಈ ಕಡೆ ಸರ್ಕಾರದವರ ಗಮನ ಹರಿಯುವುದೋ ಹೇಗೆ?

† ಶ್ರೀ ಎಸ್. ಎಂ. ಕೃಷ್ಣ :—ಅನ್ನ ಸತ್ಯಾಗ್ರಹ ಪ್ರಾರಂಭವಾಗಿದ್ದು, ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರು. ಆಗ ಸರ್ಕಾರದವರು ಒಂದು ವಿಶೇಷವಾದ ಆರ್ಡರ್ ಹೊರಡಿಸಿ ಬಿಜಾಪುರ ಜಿಲ್ಲೆ, ಬೆಳಗಾಂ ಜಿಲ್ಲೆ, ಧಾರವಾಡ ಜಿಲ್ಲೆ, ಗುಲ್ಬರ್ಗ ಜಿಲ್ಲೆ, ಮತ್ತು ಬಿದರೆ ಜಿಲ್ಲೆಗಳಲ್ಲಿ ಒಂದೆರಡು ಯಾರ್ನ ಡಿಪೋ ಪ್ರಾರಂಭ ಮಾಡಿ ನೇಕಾರರು ಏನು ಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅವರಿಗೆ ಕೊಂಚಮಟ್ಟಿಗಾದರೂ ಕೂಡ ಸಹಾಯಕ್ಕೆ ಹೋಗಬೇಕೂ ಎನ್ನುವ ಸದುದ್ದೇಶದಿಂದ ಯಾರ್ನ ಡಿಪೋ ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರಿಗೆಲ್ಲ ಮನವರಿಕೆ ಇದೆ, ನೂಲು ಸಿಕ್ಕುತಕ್ಕದ್ದು ಬಹಳ ಕಷ್ಟ. ಕೇಂದ್ರ ಸರ್ಕಾರದ

ಟೆಕ್ಸ್‌ಟೈಲ್ ಕಮೀಷನರು ನಮಗೆ ತಿಂಗಳಿಗೆ ಇಂತಿಷ್ಟು ಎಂದು ಕೊಡುತ್ತಿದ್ದಾರೆ. ಅಭಾವ ಪರಿಸ್ಥಿತಿಯಿಂದಾಗಿ ಕರ್ನಾಟಕ ರಾಜ್ಯಕ್ಕೆ ವಿಶೇಷವಾಗಿ ಎರಡು ಲಕ್ಷ ಕೆ.ಜಿ. ನೂಲನ್ನು ಅಲಾಟ್ ಮಾಡಬೇಕೆಂದು ನಾವು ಕೇಳಿಕೊಂಡಿದ್ದೆವು. ಅವರು ಕೇವಲ 40 ಸಹಸ್ರ ಕೆ.ಜಿ. ನೂಲನ್ನು ವಿಶೇಷ ಅಲಾಟ್‌ಮೆಂಟ್ ಎಂದು ಕೊಟ್ಟಿದ್ದಾರೆ. ನಾವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು, ಸಾಧ್ಯವಿದ್ದರೆ ಹೋಗಿ, ವಿಶೇಷವಾಗಿ ಹೆಚ್ಚಿನ ಅಲಾಟ್‌ಮೆಂಟ್ ಪಡೆದು ಅಲ್ಲಿರತಕ್ಕ ನೇಕಾರರಿಗೆ ಒದಗಿಸಿಕೊಡಬೇಕು ಎನ್ನುವುದಕ್ಕೆ ತೀವ್ರವಾದ ಪ್ರಯತ್ನಗಳನ್ನು ಮಾಡುತ್ತಿದ್ದೇವೆ.

ಶ್ರೀ ಜೆ. ಎಲ್. ಕಬಾಡಿ.—ಸ್ವಾಮಿ ರಬಕವಿ, ಬನಹಟ್ಟಿ, ಗುಳೇದಗುಡ್ಡ, ಇಲಕಲ್ ಹಾಗೂ ಬಿಜಾಪುರ ಜಿಲೆಯಲ್ಲಿರುವ ಕೈಮಗ್ಗದ ನೇಕಾರರಿಗೆ ಬಿಜಾಪುರ ಜಿಲ್ಲೆಯ ಬನಹಟ್ಟಿ ಹಾಗೂ ಇಲ್‌ಕಲ್ಲುಗಳಲ್ಲಿ ನೂಲು ಬಂಡಾರಗಳನ್ನು ತೆರೆಯಲು ಸರ್ಕಾರದವರು ಆದೇಶಗಳನ್ನು ಹೊರಡಿಸಿದ್ದಾರೆ ಎಂದು ಹೇಳಿದ್ದೀರಿ. ಈಗಲೂ ಕೂಡ ಅಲ್ಲಿ ನೂಲು ಸಪ್ಲೈ ಮಾಡದೇ ಇರುವುದರಿಂದ ಅನ್ನ ಸತ್ಯಾಗ್ರಹ ನಡೆಯುತ್ತಾ ಇದೆ. ಏತಕ್ಕೆಂದರೆ ಅಧಿಕಾರಿಗಳನ್ನು ಕೇಳಿದಕ್ಕೆ ಆ ಗ್ರಾಮದ ಡಿಪೋಗಳನ್ನು ತೆರೆದು ನೂಲಿನ ಕೊರತೆಯನ್ನು ಪೂರೈಸುವುದಕ್ಕೆ ಕಾನೂನು ಬದ್ಧವಾಗಿ ನಾವು ಹೇಗೆ ಕೊಡಬೇಕು ಎನ್ನುವುದರ ಬಗ್ಗೆ ಸರಿಯಾದ ಆದೇಶ ಬಂದಿಲ್ಲ ಎಂದು ಹೇಳುತ್ತಾರೆ ಆದುದರಿಂದ ಈ ಕೊರತೆಯನ್ನು ನಿವಾರಿಸುವುದಕ್ಕೆ ಅವರಿಗೆ ತೀವ್ರವಾಗಿ ಆದೇಶವನ್ನು ಒಂದು ಕೊಡುತ್ತೀರಾ?

ಶ್ರೀ ಎಸ್ ಎಂ ಕೃಷ್ಣ.—ಮಾನ್ಯ ಬಂಗಿಯವರು ಬನಹಟ್ಟಿಯಲ್ಲಿ ಒಂದು ಬಾಡಾರವನು ಒಪನ್ ಮಾಡಿ ಅವರೇ ನೇಕಾರರಿಗೆ ನೂಲನ್ನು ಹಂಚಿದ್ದಾರೆ. ಹಾಗೆಯೇ ನಂಜನಗೂಡ ಇಲ್ಲಕಲನಲ್ಲೂ ಕೂಡ ಒಪನ್ ಮಾಡಿ ನೂಲನ್ನು ಹಂಚಿದ್ದಾರೆ. ಹಾಗೆಯೇ ಕಲ್ಲಳ್ಳಿಯಲ್ಲೂ ಪ್ರಾರಂಭ ಮಾಡಿದ್ದಾರೆ ಮತ್ತು ಗುರುಮಿಠಕಲ್‌ನಲ್ಲೂ ಒಪನ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ.

ಶ್ರೀ ಜೆ ಎಲ್. ಕಬಾಡಿ :—ಬನಹಟ್ಟಿಯಲ್ಲಿ ಒಪನ್ ಆಗಿದ್ದರೆ ಅನ್ನ ಸತ್ಯಾಗ್ರಹ ಇನ್ನೂ ಏತಕ್ಕೆ ನಡೆಯುತ್ತಿತ್ತು?

ಶ್ರೀ ಎಸ್. ಎಂ. ಕೃಷ್ಣ.—ಈಗಾಗಲೇ ಮಾನ ಮುಖ್ಯಮಂತ್ರಿಗಳು ಪ್ರಾರ್ಥನೆ ಮಾಡಿಕೊಂಡಿದಾರೆ. ಅನ್ನ ಸತ್ಯಾಗ್ರಹವನ್ನು ನಿಲ್ಲಿಸಬೇಕು ನಾವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ ಇಷ್ಟು ಏಪರ್ಚಾಟುಗಳನ್ನು ಮಾಡಿ ನಮ್ಮ ಪ್ರಾಮಾಣಿಕತೆಯನ್ನು ತೋರಿಸಿದರೂ ಕೂಡ ಇನ್ನೂ ಅನ್ನಸತ್ಯಾಗ್ರಹವನ್ನು ನಿಲ್ಲಿಸದೆ ಈರೀತಿ ವರ್ತಿಸುವುದು ಕ್ರಮವಲ್ಲ.

ಶ್ರೀಮತಿ ವಿಜಯ ದೇಸಾಯಿ.—ನೇಕಾರರ ಪರಿಹಾರಕ್ಕಾಗಿ ೨೯ನೆ ನವಂಬರ್‌ನಲ್ಲಿ ಹೊರಡಿಸಿದ ಆರ್ಡರ್ ಬಿಜಾಪುರಕ್ಕೆ ಮಾತ್ರ ಎಂದು ಕೇಳಿದ್ದೆ ಅದನ್ನು ಗುಲ್ಬರ್ಗಾಕ್ಕೂ ಎಕ್ಸ್‌ಟೆಂಡ್ ಮಾಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.—ಈಗಾಗಲೇ ಮಾಡಿದೆ.

ಶ್ರೀ ಶರಣಪ್ಪ.—ಈಗ ಗುಲ್ಬರ್ಗ, ಬಿಜಾಪುರ ಮತ್ತು ಧಾರವಾಡದ ಕೆಲವು ಭಾಗಗಳಲ್ಲಿ ಈರೀತಿ ಸೌಕರ್ಯ ಕೊಟ್ಟಿದೆ ಎಂದು ಹೇಳಿದಿರಿ. ರಾಯಚೂರು ಜಿಲ್ಲೆಯಲ್ಲಿ ಸುಮಾರು ೧೪ಸೊಸೈಟಿಗಳಲ್ಲಿ ಸುಮಾರು ೫ ಸಾವಿರ ಮಂದಿ ನೇಕಾರರು ಕೆಲಸ ಮಾಡುತ್ತಿದ್ದಾರೆ ಆ ಜನರಿಗೆ ಸಾಕಷ್ಟು ನೂಲು ಸಿಕ್ಕುತ್ತಾ ಇಲ್ಲ. ಆದಕ್ಕಾಗಿ ರಾಯಚೂರು ಜಿಲ್ಲೆಯಲ್ಲಿ ಒಂದು ಡಿಪೋವನ್ನು ತೆರೆಯುವ ವ್ಯವಸ್ಥೆ ಮಾಡುತ್ತೀರಾ ಅಥವಾ ಇಲಕಲ್ಲುಗಳಲ್ಲಿರುವ ಹಾಗೆ ಆ ಪ್ರದೇಶಗಳಲ್ಲೂ ನೂಲನ್ನು ಕೊಡುವಹಾಗೆ ಕೊಟಾ ಒದಗಿಸುವ ವ ವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಇದರ ಬಗ್ಗೆ ಈಗ ತಾನೇ ಗಮನವನ್ನು ಸೆಳೆದಿದ್ದಾರೆ.ಅದಕ್ಕೆ ಸೂಕ್ತ ಪರಿಹಾರವನ್ನು ದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.—ಸ್ವಾಮಿ, ನಮ ರಾಜ್ಯದಲ್ಲಿ ಈ ಪರಿಸ್ಥಿತಿ ಬಿಜಾಪುರ ಜಿಲ್ಲೆಯೊಂದರಲ್ಲೇ ಅಲ್ಲ ಬೆಳಗಾಂ ಮತ್ತು ಧಾರವಾರ ಜಿಲ್ಲೆಗಳಲ್ಲೂ ಕೂಡ ಈ ಪರಿಸ್ಥಿತಿ ಇದೆ, ಅಲ್ಲಿ ಬೇಕಾದಷ್ಟು ಮಗ್ಗಗಳು, ಸಹಕಾರಿ ಸಂಸ್ಥೆಗಳು ಇವೆ. ಆದುದರಿಂದ ಬಾಗಲಕೋಟೆ ಯಲ್ಲಿರುವಂತೆ ಆ ಜಿಲ್ಲೆಗಳಿಗೂ ಸಹಾಯಧನವನ್ನು ಪೂರೈಸುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇದು ಬಿಜಾಪುರಕ್ಕೆ ಸಂಬಂಧಪಟ್ಟ ಪ್ರಶ್ನೆ ಆದ್ದರಿಂದ ತಾವು ಕೇಳಿದ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಜೆ.ಎಲ್. ಕಬಾಡಿ.—ಸ್ವಾಮಿ, ಪಿ. ಡಬ್ಲ್ಯು. ಡಿ. ಮಂತ್ರಿಗಳು ಇಲ್ಲಿಗೆ ಭೇಟಿ ಇತ್ತಾಗ ೨ದಿವಸದಲ್ಲೇ ಕೊರತೆಯಾಗಿರುವ ಎಲ್ಲಾ ನೂಲನ್ನೂ ಒದಗಿಸಿಕೊಡುತ್ತೇವೆ ಅವರಿಗೆ ಕೂಲಿಯನ್ನೂ ಒದಗಿಸಿ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟರು. ಆದರೆ ೨ ತಿಂಗಳಾದರೂ ಕೂಡ ಅಲ್ಲಿಗೆ ಸಪ್ಲೈ ಆಗದೇ ಇರುವುದಕ್ಕೆ ಕಾರಣ ಏನು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—೨ದಿವಸದಲೇ ಎಲ್ಲಾ ಮಾಡುತ್ತೇವೆ ಎಂದೂ ಭರವಸೆ ಕೊಟ್ಟರು ಎಂದು ಮಾನ್ಯ ಸದಸ್ಯರು ಏನು ಹೇಳಿದರೋ ಅದು ಅಷ್ಟು ಸಮಂಜಸವಾಗಿಕಾಣುತ್ತದೆಯೇ ಎಂದು ಸಭೆಯೋಚನೆ ಮಾಡಬೇಕು.

ಶ್ರೀ ಜೆ. ಎಲ್. ಕಬಾಡಿ.—ಅದನ್ನು ರುಜುವಾತು ಮಾಡಿದರೆ ರಾಜೀನಾಮೆ ಕೊಡುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ನಾನು ಹೇಳಿದ್ದು ೨ ದಿವಸದಲ್ಲಿ ಸಂಬಂಧಪಟ್ಟ ಆಫೀಸರುಗಳನ್ನು ಬರಮಾಡಿಕೊಂಡು ಇದರ ಬಗ್ಗೆ ಏನೇನು ಮಾಡಬೇಕೆಂಬುದನ್ನು ವಿಚಾರ ಮಾಡಿ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗುತ್ತದೆ ಎಂದು ಆ ರೀತಿ ಹೇಳಿದ್ದು ನಿಜ.

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ, ಕೈಮಗ್ಗದ ನೇಕಾರರಿಗೆ ೪೨, ೬೦, ೮೦ ನೇ ನಂಬರ ನೂಲನ್ನು ಒದಗಿಸಲು ಸಾಕಾದಷ್ಟು ದಾರದ ಉತ್ಪತ್ತಿ ಇಲ್ಲ ಮತ್ತು ನೇಕಾರರಿಗೆ ಕೂಲಿ ಕೊಡುವುದನ್ನು ಒದಗಿಸುತ್ತಾ ಇಲ್ಲ ಎನ್ನುವ ಅಂಶ ಈ ಪ್ರಶ್ನೆಯಲ್ಲಿ ಅಡಕವಾಗಿದೆ. ನಾನು ಇದಕ್ಕೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಮಂತ್ರಿಗಳಿಗೆ ಪತ್ರ ಬರೆದಿದ್ದೆ. ಬೆಂಗಳೂರಿನಲ್ಲಿರತಕ್ಕ ಹತ್ತಿ ಗಿರಣಿಗಳಲ್ಲಿ ದಾರದ ಉತ್ಪತ್ತಿ ಕಡಿಮೆಯಾಗಿದೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ಮೀಟಿಂಗ್ ಕರೆಯಿರಿ ಎಂದು. ಮಾನ್ಯ ಮಂತ್ರಿಗಳು ತಾರೀಖು ೧೦ ನೇ ಅಕ್ಟೋಬರ್ ೧೯೨೨ ರಲ್ಲಿ ಮೀಟಿಂಗ್ ಕರೆದರು. ಮತ್ತೆ ಅದನ್ನು ಮಜಾ ಮಾಡಿರುವುದಕ್ಕೆ ಕಾರಣ ಏನು ಎಂದು ತಿಳಿಸುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಈ ಮೀಟಿಂಗನ್ನು ಇನ್ನು ನಾಲ್ಕಾರು ದಿವಸದಲ್ಲೇ ಕರೆದು ಹೇಳುತ್ತೇನೆ. ಏಂಲ್‌ನಲ್ಲಿ ಎಷ್ಟು ನೂಲು ಇದೆ ಅದನ್ನು ರಾಜ್ಯ ಸರ್ಕಾರಕ್ಕೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ಎಂದು ಅವರನ್ನು ಕೇಳಿ ತಿಳಿಯಬೇಕಾಗಿದೆ. ಆದರೆ ಇದರಲ್ಲಿ ಮುಖ್ಯವಾದ ಪ್ರಶ್ನೆ ಅವರು ನೂಲಿನ ಕೋಟಾ ಚಾಸ್ತಿ ಕೊಡುವುದಾಗಲಿ, ಕಡಿಮೆ ಕೊಡುವುದಾಗಲಿ ಅದನ್ನು ಟೆಕ್ಸ್‌ಟೈಲ್ ಕಮೀಷನರ್ ಅಲಾಟ್ ಮಾಡುವ ಅಥಾರಿಟಿ ಇದೆ. ಅವರು ಪರ್ಮಿಷನ್ ಕೊಡದೆ ಹೋದರೆ ಚಾಸ್ತಿ ಕೊಡುವುದಕ್ಕೂ ಬರುವುದಿಲ್ಲ. ನೂಲಿನ ಕೋಟಾ ಕಡಿಮೆ ಆಗುವುದಕ್ಕೆ ಕಾರಣಗಳೇನು ಏನ್ನುವುದಕ್ಕೆ ಸಭೆ ಸೇರಿ ವಿಚಾರ ವಿನಿಮಯ ಮಾಡಬೇಕು.

ಶ್ರೀ ಪಿ. ಎಂ. ಬಂಗಿ.—ಕಳೆದ ತಿಂಗಳು ೨೨ ನೇ ತಾರೀಖು ಒಂದು ಆರ್ಡರ್ ಹೊರಡಿಸಿದ್ದೀರಿ. ಅದು ಈ ರೀತಿ ಇದೆ.—

> "Joint Director of Industries and Commerce and *ex-officio* Joint Director of Industrial Co-operatives is authorised to purchase yarn against the order received from the Textile Commissioner and if sufficient quantity is not forthcoming from the mills, he is authorised to purchase directly at the rates fixed by the Textile Commissioner."

ಆದುದರಿಂದ ಅವರಿಗೆ ಕೊಟ್ಟಂಥ ನೂಲು ಸಾಲದೇ ಇದ್ದ ಪಕ್ಷದಲ್ಲಿ ಓಪನ್ ಮಾರ್ಕೆಟ್‌ನಲ್ಲಿ ಖರೀದಿ ಮಾಡಬೇಕು ಎಂದು ಇದೆ. ಆ ಪ್ರಕಾರ ಈ ಆದೇಶದ ೨ ನೇ ಪ್ಯಾರಾದಲ್ಲಿ ಉಲ್ಲೇಖವಾಗಿದೆ. ಈಗ ಪೇಟೆಯಲ್ಲಿ ಸಾಕಷ್ಟು ನೂಲು ದೊರೆಯುತ್ತದೆ. ಆದುದರಿಂದ ಗೋಕಾಕ್ ಮತ್ತು ಬೆಂಗಳೂರಿನಲ್ಲಿ ನೂಲನ್ನು ಸರ್ಕಾರದವರು ಖರೀದಿ ಮಾಡಿ ಬಡ ನೇಕಾರರಿಗೆ ಯೋಗ್ಯ ದರದಲ್ಲಿ ಸಿಕ್ಕುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಓಪನ್ ಮಾರ್ಕೆಟ್‌ನಲ್ಲಿ, ಯೋಗ್ಯ ದರದಲ್ಲಿ ನೂಲು ಸಿಕ್ಕಿದರೆ ಆ ನೂಲನ್ನು ಕೊಂಡುಕೊಂಡು ನೇಕಾರರಿಗೆ ವಿತರಣೆ ಮಾಡಬೇಕು ಎನ್ನುವ ದೃಷ್ಟಿಯಿಂದ ಗೌರ್ನಮೆಂಟ್ ಆರ್ಡರ್ ಹೊರಡಿಸಿದೆ, ತಾವು ಓದಿದಿರಾ. ಅದು ೨ ನೇ ಪ್ಯಾರಾದಲ್ಲ ಸೇರಿದೆ.

ಶ್ರೀ ಎಚ್. ಡಿ. ದೇವೇಗೌಡ,—ನೇಕಾರರ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸರ್ಕಾರ ಡಿಪೋ ಗಳನ್ನು ಓಪನ್ ಮಾಡಬೇಕು ಎಂದು ಕೆಲವು ನಿರ್ಣಯ ತೆಗೆದುಕೊಂಡಿದ್ದಾರೆ ಸರಿ ಕಡೆ ಇದನ್ನು ಮಾಡುತ್ತಾರೆಂದು ಹೇಳಿದುದು ಸ್ವಾಗತಾರ್ಹ. ಹೈದರಾಬಾದ್, ಬಾಂಬೆ, ಕರ್ನಾಟಕ ವಿಭಾಗದಲ್ಲಿ ಉಲ್ಬಣ ಸಮಸ್ಯೆ ಕಂಡು ಬಂದಿದೆ. ಅವಶ್ಯಕವಾಗಿ ರೋಣ, ಬಾಗಲಕೋಟೆ, ಬಸವಕಟ್ಟಿ, ರಬಕವಿ ಮತ್ತು ಎಲ್ಲಿಮಗ್ಗುಗಳು ೨ ಸಾವಿರ ಇವೆ ಅಲ್ಲಿ ಇಂತಹ ಸಮಸ್ಯೆ ಎದುರಿಸತಕ್ಕ ಕಾಲದಲ್ಲಿ ಕೇಂದ್ರದಿಂದ ೨ ಲಕ್ಷ ಕೆಜಿ ನೂಲನ್ನು ಕೇಳಿದ್ದೀರಿ. ನಿಮಗೆ ೪೦ ಸಾವಿರ ಕೆಜಿ ನೂಲು ಬಂದಿದೆ. ಕ್ಷಾಮ ಪರಿಸ್ಥಿತಿಯಲ್ಲಿ ಇರತಕ್ಕ ಕಾಲದಲ್ಲಿ ಸಾಧ್ಯವಾದ ಮಟ್ಟಿಗೆ ಈ ಸೌಲಭ್ಯವನ್ನು ಪ್ರದೇಶಗಳಲ್ಲಿ ಇರತಕ್ಕ ಜನ ಪಡೆಯುವುದಕ್ಕೆ ಡಿಪೋ ಗಳನ್ನು ತೆಗೆದು ಈ ಮುಖ್ಯವಾದ ಸಮಸ್ಯೆಯನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ .—ಮಾನ್ಯ ವಿರೋಧ ಪಕ್ಷದ ನಾಯಕರು ಏನು ಜನರಲ್ ಪ್ರಿನ್ಸಿಪಲ್ ಎನೆನೆಸಿಯೇಟ್ ಮಾಡಿದರು ಆ ಪ್ರಿನ್ಸಿಪಲ್ ಆಧಾರದ ಮೇಲೆ ಕೆಲವು ಡಿಪೋಗಳನ್ನು ಪ್ರಾರಂಭಿಸಬೇಕು ಎಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಬಿಜಾಪುರ ಜಿಲ್ಲೆಯಲ್ಲಿ ಬನಹಟ್ಟಿ ಇಲ್ಕಲ್‌ನಲ್ಲಿ ಜಾಸ್ತಿ ಕಾನ್ಸ್‌ಂಟ್ರೇಷನ್ ಆಫ್ ವೀವರ್ಸ್ ಇದ್ದಾರೆ ಎಂದು ನಮ್ಮ ಅಂಕಿಅಂಶಗಳಿಂದ ತೀರ್ಮಾನಕ್ಕೆ ಬಂದಿದ್ದೇವೆ. ಚಿಂಚೋಳಿಯಲ್ಲಿ ವೀವರ್ಸ್ ಇಲ್ಲ ಎಂದು ಅಭಿಪ್ರಾಯ ವಲ್ಲ. ಅದುಕೂಡ ಪರಿಶೀಲನೆ ಮಾಡುತ್ತೇವೆ. ಮುಖ್ಯವಾದ ತೊಂದರೆ ಏನು ಎಂದರೆ ಅಗತ್ಯವಾಗಿ ಬೇಕಾಗಿರತಕ್ಕ ನೂಲು ಸಿಕ್ಕುವುದು. ಎರಡನೇಯದು ಬಹು ಮುಖ್ಯವಾಗಿರತಕ್ಕದ್ದು ಹಣಕಾಸಿನ ವ್ಯವಸ್ಥೆ. ೩೦ ಲಕ್ಷ ಒದಗಿಸಿ ಕೊಡಬೇಕಾದರೆ 64 ಫ್ಯಾಮಿನ್ ರಿಲೀಫ್ ಪ್ರಕಾರ ಒದಗಿಸಿಕೊಟ್ಟಿದ್ದೇವೆ. ಒಂದುಕೋಟಿ ೪೦ ಲಕ್ಷ ರೂಪಾಯಿಯ ಸ್ಕೀಮನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಈ ಸ್ಕೀಮ್ ಅದೃಷ್ಟವಶಾತ್ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ಬಂದರೆ ವಿಕ್ಕ ಪ್ರದೇಶಗಳಲ್ಲೂ ಕೂಡ ನೂಲನ್ನು ವಿತರಣೆ ಮಾಡುವ ಕೇಂದ್ರಗಳನ್ನು ನಾವು ನಡೆಸಬಹುದಾಗಿದೆ. ದೊಡ್ಡಪಾಳ್ಯ ದೊಡ್ಡಬಳ್ಳಾಪುರ ತಾಲ್ಲೂಕು, ಪಾಂಡ್ಯ ಜಿಲ್ಲೆಯಲ್ಲಿ ಕೊಡಿಯಾಲ ಗ್ರಾಮ ಜನರು ಬಂದಿದ್ದರು ಯಾರ್ನ್ ಡಿಪೋ ಮಾಡ ಬೇಕೆಂದು ಕೇಳಿದ್ದಾರೆ. ಬೇರೆ ಎಲ್ಲಾ ಕಡೆಯಿಂದ ಇದರ ಬಗ್ಗೆ ಬೇಡಿಕೆಗಳು ಬರುತ್ತಿವೆ. ಸಾಮಾನ್ಯವಾಗಿ ಈ ಸಭೆ ಸದಸ್ಯರು ಹೇಳುತ್ತಿದ್ದಾರೆ. ಎಲ್ಲವನ್ನು ಮಾಡಬೇಕು ಎನ್ನುವುದು ನಮ್ಮ ಇಚ್ಛೆ, ಮಂತ್ರಿ ಆಸೆ. ಆದರೆ ಮುಖ್ಯವಾಗಿ ಹಣಕಾಸಿನ ಸೌಲತ್ತು ನೂಲಿನ ಸೌಲತ್ತು ಬೇಕು. ಈ ಎರಡು ಕಾರಣಗಳಿಂದ ಕುಂಟಿ ಕೊಂಡು ಮುಂದೆ ಹೋಗಬೇಕಾಗಿದೆ.

MUNSIFF-MAGISTRATE'S COURT AT SAKLESHPUR

496. SRI K. M. RUDRAPPA (Sakleshpur).—

Will the Minister for Law and Parliamentary Affairs be pleased to state.—

(*a*) whether any representation has been made by the public or local bodies of Sakleshpur Taluk for the establishment of a Munsiff-Magistrate's Court at Sakleshpur ;

(*b*) whether the Government have realised that the Munsiff-Magistrate's Court is essential for Sakleshpur ;

(*c*) if so, whether there is any proposal before the Government to establish it ?

SRI D. K. NAIKAR.—(Minister for Law and Parliamentary Affairs)

(*a*) Yes.

(*b*) No.

(*c*) Does not arise in view of reply to (*b*).